All India Radio: Bangalore
National Bulletins In Kannada
08.07.2025 / 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<><*<><>*><>

ಮುಖ್ಯಾಂಶಗಳು

೧. ಬ್ರೆಸಿಲ್‌ಗೆ ಅಧಿಕೃತ ಭೇಟಿಗಾಗಿ ಬ್ರೆಸಿಲಿಯಾಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ

೨. ಇಂಧನ ಕ್ಷೇತ್ರದ ನೂತನ ತಂತ್ರಜ್ಞಾನ ಕುರಿತು ನಾರ್ವೆಯ ತಜ್ಞರೊಂದಿಗೆ ಸಚಿವ ಹರ್ದೀಪ್‌ಸಿಂಗ್ ಪುರಿ ಚರ್ಚೆ

೩. ದಕ್ಷಿಣ ಕೊರಿಯಾ, ಜಪಾನ್‌ಗೆ ಶೇಕಡಾ ೨೫ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಣೆ

೪. ಕ್ರಿಕೆಟ್ ; ಏಕದಿನ ಸರಣಿ ವಶಪಡಿಸಿಕೊಂಡ ೧೯ ವರ್ಷದೊಳಗಿನ ಭಾರತ ತಂಡ

><><><><><><><><

ಪ್ರಧಾನಿ ನರೇಂದ್ರ ಮೋದಿ ಅವರು ಬ್ರೆಸಿಲ್‌ಗೆ ಅಧಿಕೃತ ಭೇಟಿಗಾಗಿ ಇಂದು ಬೆಳಗ್ಗೆ ಬ್ರೆಸಿಲಿಯಾಗೆ ಆಗಮಿಸಿದರು. ಅವರನ್ನು ಬ್ರೆಸಿಲ್ ರಕ್ಷಣಾ ಸಚಿವ ಜೋಸ್ ಮ್ಯೂಸಿಯೊ ಮಾಂಟೆರೊ ಫಿಲ್ಹೋ ವಿಮಾನ ನಿಲ್ದಾಣದಲ್ಲಿ ಆತ್ಮೀಯವಾಗಿ ಬರಮಾಡಿಕೊಂಡರು. ಜುಲೈ ೬ ಮತ್ತು ೭ ರಂದು ರಿಯೊ ಡಿ ಜನೈರೊದಲ್ಲಿ ಎರಡು ದಿನಗಳ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಿದ ನಂತರ ಅವರು ಬ್ರೆಸಿಲಿಯಾಗೆ ಆಗಮಿಸಿದರು. ಸಾಮಾಜಿಕ ಮಾಧ್ಯಮದಲ್ಲಿ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಭಾರತ-ಬ್ರೆಸಿಲ್ ದೃಢ ಪಾಲುದಾರಿಕೆಯಲ್ಲಿ ಹೊಸ ಪ್ರಗತಿ ಸಾಧಿಸುತ್ತಿದೆ. ಪ್ರಧಾನಿ ಮೋದಿ ಅವರು ಪರಸ್ಪರ ಆಸಕ್ತಿಯ ಕ್ಷೇತ್ರಗಳಲ್ಲಿ ಎರಡೂ ರಾಷ್ಟ್ರಗಳ ನಡುವಿನ ಕಾರ್ಯತಂತ್ರದ ಪಾಲುದಾರಿಕೆಯನ್ನು ವಿಸ್ತರಿಸುವ ಕುರಿತು ಪ್ರಧಾನಿ ಮೋದಿ ಲೂಯಿಜ್ ಇನಾಸಿಯೊ ಲುಲಾ ಡ ಸಿಲ್ವಾ ಅವರೊಂದಿಗೆ ದ್ವಿಪಕ್ಷೀಯ ಚರ್ಚೆಗಳನ್ನು ನಡೆಸಲಿದ್ದಾರೆ. ವ್ಯಾಪಾರ, ರಕ್ಷಣೆ, ಇಂಧನ, ಬಾಹ್ಯಾಕಾಶ, ತಂತ್ರಜ್ಞಾನ, ಕೃಷಿ, ಆರೋಗ್ಯ ಮತ್ತು ಜನರಿಂದ ಜನರಿಗೆ ಸಂಪರ್ಕಗಳನ್ನು ಸಹ ಚರ್ಚೆ ಒಳಗೊಂಡಿರುತ್ತವೆ. ಇದರ ನಂತರ ನಿಯೋಗ ಮಟ್ಟದ

ಮಾತುಕತೆಗಳು ನಡೆಯಲಿವೆ. ಪರಸ್ಪರ ಆಸಕ್ತಿಯ ಕ್ಷೇತ್ರಗಳಲ್ಲಿ ಸಹಕಾರವನ್ನು ಬೆಳೆಸಲು ಎರಡೂ ದೇಶಗಳು ಒಪ್ಪಂದಗಳಿಗೆ ಸಹಿ ಹಾಕಲಿವೆ. ಪ್ರಧಾನಿಯವರ ದ್ವಿಪಕ್ಷೀಯ ಸಭೆಗಳ ಸಂದರ್ಭದಲ್ಲಿ ನಾಲ್ಕು ಒಪ್ಪಂದಗಳಿಗೆ ಸಹಿ ಹಾಕಲಾಗುವುದು ಎಂದು ಬ್ರೆಸಿಲ್‌ನಲ್ಲಿರುವ ಭಾರತೀಯ ರಾಯಭಾರಿ ದಿನೇಶ್ ಭಾಟಿಯಾ ತಿಳಿಸಿದ್ದಾರೆ. ಭಯೋತ್ಪಾದನೆ ನಿಗ್ರಹದಲ್ಲಿ ಒಟ್ಟಾಗಿ ಕೆಲಸ ಮಾಡುವುದು, ಗೌಪ್ಯ ಮಾಹಿತಿಯನ್ನು ಪರಸ್ಪರ ಹಂಚಿಕೊಳ್ಳುವುದು, ನವೀಕರಿಸಬಹುದಾದ ಇಂಧನ ಮತ್ತು ಕೃಷಿ ಸಂಶೋಧನೆಯಲ್ಲಿ ಸಹಕರಿಸುವುದು ಇವುಗಳ ಮೇಲೆ ಕೇಂದ್ರೀಕರಿಸುತ್ತವೆ ಎಂದು ಅವರು ಮಾಹಿತಿ ನೀಡಿದ್ದಾರೆ. ನಂತರ ಪ್ರಧಾನಿ ಮೋದಿ ಅವರು ನಮೀಬಿಯಾಗೆ ತೆರಳಲಿದ್ದಾರೆ. ಅದು ಪ್ರಧಾನಿಯವರ ಐದು ರಾಷ್ಟ್ರಗಳ ವಿದೇಶ ಪ್ರವಾಸದ ಕೊನೆಯ ಹಂತವಾಗಿದೆ. ಇದಕ್ಕೂ ಮುನ್ನ ಪ್ರಧಾನಿ ಮೋದಿ ತಮ್ಮ ಬ್ರೆಸಿಲ್ ಪ್ರವಾಸವನ್ನು ಬಹಳ ಉತ್ಪಾದಕ ಎಂದು ಕರೆದಿದ್ದಾರೆ. ಬ್ರಿಕ್ಸ್ ಶೃಂಗಸಭೆಯಲ್ಲಿ ವ್ಯಾಪಕ ಚರ್ಚೆಗಳನ್ನು ನಡೆಸಿರುವುದಾಗಿ ಅವರು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಬ್ರಿಕ್ಸ್ ಶೃಂಗಸಭೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುವಲ್ಲಿ ಬ್ರೆಸಿಲ್ ಅಧ್ಯಕ್ಷರು ಮತ್ತು ಬ್ರೆಸಿಲ್ ಸರ್ಕಾರವು ತಮ್ಮ ಬ್ರಿಕ್ಸ್ ಅಧ್ಯಕ್ಷತೆಯ ಮೂಲಕ ಮಾಡಿದ ಕಾರ್ಯಕ್ಕಾಗಿ ಅವರನ್ನು ಶ್ಲಾಘಿಸಿದರು. ವಿಶ್ವ ನಾಯಕರೊಂದಿಗಿನ ಅವರ ದ್ವಿಪಕ್ಷೀಯ ಸಭೆಗಳು ವಿವಿಧ ರಾಷ್ಟ್ರಗಳೊಂದಿಗೆ ಭಾರತದ ಸ್ನೇಹವನ್ನು ಹೆಚ್ಚಿಸುತ್ತವೆ ಎಂದು ಅವರು ಹೇಳಿದರು. ಇದಕ್ಕೂ ಮೊದಲು, ರಿಯೊ ಡಿ ಜನ್ಯೆರೊದಲ್ಲಿ ಪರಿಸರ, ಸಿಒಪಿ ೩೦ ಮತ್ತು ಜಾಗತಿಕ ಆರೋಗ್ಯದ ಕುರಿತಾದ ಅಧಿವೇಶನದಲ್ಲಿ ಬ್ರಿಕ್ಸ್ ಶೃಂಗಸಭೆಯಲ್ಲಿ ಮಾತನಾಡಿದ ಪ್ರಧಾನಿ, ಭೂಮಿ ಮತ್ತು ಮಾನವ ಆರೋಗ್ಯವು ಪರಸ್ಪರ ಸಂಬಂಧ ಹೊಂದಿದೆ ಮತ್ತು ಭಾರತೀಯರು ಪೀಳಿಗೆಯಿಂದ ಪ್ರಕೃತಿಯ ಬಗ್ಗೆ ಗೌರವವನ್ನು ಹೊಂದಿದ್ದಾರೆ ಎಂದು ಹೇಳಿದರು. ಭಾರತಕ್ಕೆ ಹವಾಮಾನ ನ್ಯಾಯವು ಪರ್ಯಾಯವಲ್ಲ. ಆದರೆ ನೈತಿಕ ಕರ್ತವ್ಯ ಎಂದು ಅವರು ಒತ್ತಿ ಹೇಳಿದರು. ಮುಂದಿನ ವರ್ಷ ಬ್ರಿಕ್ಸ್‌ನ ಭಾರತದ ಅಧ್ಯಕ್ಷತೆಯಲ್ಲಿ, ಇದನ್ನು 'ಸಹಕಾರ ಮತ್ತು ಸುಸ್ಥಿರತೆಗಾಗಿ ಸ್ಥಿತಿಸ್ಥಾಪಕತ್ವ ಮತ್ತು ನಾವೀನ್ಯತೆಯನ್ನು ನಿರ್ಮಿಸುವುದು' ಎಂದು ಮರು ವ್ಯಾಖ್ಯಾನಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

><><><><><><><><

ಐದು ರಾಷ್ಟ್ರಗಳ ಭೇಟಿಯ ಕೊನೆಯ ಹಂತದಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ನಮೀಬಿಯಾದ ಅಧ್ಯಕ್ಷ ನೆಟುಂಬೊ ನಂದಿ-ದೈತ್ವಾ ಅವರ ಆಹ್ವಾನದ ಮೇರೆಗೆ ನಾಳೆ ನಮೀಬಿಯಾದ ವಿಂಡ್‌ಹೋಕ್‌ಗೆ ತಲುಪಲಿದ್ದಾರೆ. ಇದು ನಮೀಬಿಯಾಕ್ಕೆ ಪ್ರಧಾನಿ ಮೋದಿ ಅವರ ಮೊದಲ ಭೇಟಿಯಾಗಿದೆ. ಈ ಭೇಟಿಯು ದ್ವಿಪಕ್ಷೀಯ ಸಂಬಂಧದ ವ್ಯಾಪ್ತಿಯನ್ನು ವಿಸ್ತರಿಸುವ ಮತ್ತು ಹೈಡ್ರೋಕಾರ್ಬನ್‌ಗಳು, ಭೂಮಿಯಲ್ಲಿನ ಅಪರೂಪದ ವಸ್ತುಗಳು ಮತ್ತು ಏಕೀಕೃತ ಪಾವತಿ ಪರಸ್ಪರ ಕಾರ್ಯಸಾಧ್ಯತೆಯಂತಹ ವಿವಿಧ ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರದ ಹೊಸ ಕ್ಷೇತ್ರಗಳನ್ನು ಅನ್ವೇಷಿಸುವ ಗುರಿಯನ್ನು ಹೊಂದಿದೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ.

><><><><><><><><><

ಭಾರತದ ಇಂಧನ ಸಾಮರ್ಥ್ಯಗಳನ್ನು ನವೀಕರಿಸಲು ಮತ್ತು ವಿಸ್ತರಿಸಲು ಭಾರತವು ನಾರ್ವೆಯಲ್ಲಿ ವಿವಿಧ ಯೋಜನೆಗಳನ್ನು ಅನ್ವೇಷಿಸುತ್ತಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ. ಅವರು ನಾರ್ವೆಯ ಬರ್ಗೆನ್‌ನಲ್ಲಿರುವ ನಾರ್ದರ್ನ್ ಲೈಟ್ಸ್ ಸಿಒ-೨ ಟರ್ಮಿನಲ್‌ಗೆ ಭೇಟಿ ನೀಡಿದರು ಮತ್ತು ಹೈಡ್ರೋಕಾರ್ಬನ್‌ಗಳ ಪರಿಶೋಧನೆಯ ಸಂಪೂರ್ಣ ವ್ಯಾಪ್ತಿಯನ್ನು ಒಳಗೊಂಡಿರುವ ತಂತ್ರಜ್ಞಾನಗಳ ಕುರಿತು ಚರ್ಚೆ ನಡೆಸಿದರು. ವಿಶೇಷವಾಗಿ ನಾರ್ವೇಯ ಇಂಧನ ವೃತ್ತಿಪರರಿಂದ ಆಳ ಸಮುದ್ರ ಪರಿಶೋಧನೆ ಕುರಿತು ಮಾಹಿತಿ ಪಡೆದರು. ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯ ನಾಯಕತ್ವದಲ್ಲಿ, ಭಾರತದಲ್ಲಿ ಪೂರ್ಣ ಇ ಆಂಡ್ ಪಿ ಡೀಪ್ ವಾಟರ್ ತಂತ್ರಜ್ಞಾನ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ಆಳವಾದ ನೀರಿನ ಪರಿಶೋಧನೆ, ಭೂಕಂಪನ, ತೈಲ ಸಮೀಕ್ಷೆಗಳು, ಕಡಲಾಚೆಯ ಗಾಳಿ ಮತ್ತು ಕಾರ್ಬನ್ ಸೆರೆಹಿಡಿಯುವಿಕೆ ಮತ್ತು ಶೇಖರಣಾ ತಂತ್ರಜ್ಞಾನಗಳಲ್ಲಿ ನಾರ್ವೆಯ ಪರಿಣತಿಯು ಭಾರತದ ಮಹತ್ವಾಕಾಂಕ್ಷೆಯ ಇಂಧನ ಪರಿವರ್ತನೆ ಕಾರ್ಯಸೂಚಿಯೊಂದಿಗೆ ಉತ್ತಮವಾಗಿ ಹೊಂದಿಕೆಯಾಗುತ್ತದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ.

><><><><><><><><><

ಆಗಸ್ಟ್ ೧ ರಿಂದ ಜಪಾನ್ ಮತ್ತು ದಕ್ಷಿಣ ಕೊರಿಯಾದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇಕಡ ೨೫ ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಇಂದು ೧೨ಕ್ಕೂ ಹೆಚ್ಚು ದೇಶಗಳ ನಾಯಕರಿಗೆ ಪತ್ರಗಳನ್ನು ರವಾನಿಸುವುದಾಗಿ ಟ್ರಂಪ್ ಹೇಳಿದ ಬೆನ್ನಲ್ಲೇ ಇತ್ತೀಚಿನ ಸುಂಕ ಘೋಷಣೆ ಬಂದಿದೆ. ಅಮೆರಿಕ ಅಧ್ಯಕ್ಷರು ತಮ್ಮ ಸಾಮಾಜಿಕ ಮಾಧ್ಯಮ ವೇದಿಕೆ ಟ್ರೂತ್ ಸೋಶಿಯಲ್‌ನಲ್ಲಿ ಈ ನಿರ್ಧಾರವನ್ನು ಘೋಷಿಸಿದ್ದಾರೆ. ಅಲ್ಲದೇ ಅವರು ಪ್ರತಿ ದೇಶದ ನಾಯಕರಿಗೆ ಕಳುಹಿಸಿದ ಪತ್ರಗಳ ಪ್ರತಿಗಳನ್ನು ಪೋಸ್ಟ್ ಮಾಡಿದ್ದಾರೆ.

><><><><><><><><><

ವಿಶ್ವಸಂಸ್ಥೆಯಲ್ಲಿ ನಡೆದ ಅಫ್ಘಾನಿಸ್ತಾನ ಕುರಿತಾದ ಸಾಮಾನ್ಯ ಸಭೆಯ ನಿರ್ಣಯಕ್ಕೆ ಗೈರಾಗಿರುವ ಭಾರತ, ಲಷ್ಕರ್-ಎ-ತೈಬಾ ಮತ್ತು ಜೈಶ್-ಎ-ಮೊಹಮ್ಮದ್ ಮತ್ತು ಅವರ ಪ್ರಾಯೋಜಕರು, ಆ ದೇಶದ ಭೂಪ್ರದೇಶವನ್ನು ಬಳಸಿಕೊಳ್ಳುವುದನ್ನು ತಡೆಯುವಂತೆ ಅಂತಾರಾಷ್ಟ್ರೀಯ ಸಮುದಾಯಕ್ಕೆ ಕರೆ ನೀಡಿದೆ. ಗೈರುಹಾಜರಿಯ ಕಾರಣವನ್ನು ವಿವರಿಸಿದ ವಿಶ್ವಸಂಸ್ಥೆಯಲ್ಲಿ ಭಾರತದ ಪ್ರತಿನಿಧಿ ಪಿ.ಹರೀಶ್, ವಿಶ್ವಸಂಸ್ಥೆ ಭದ್ರತಾ ಮಂಡಳಿಯಿಂದ ಗೊತ್ತುಪಡಿಸಿದ ಘಟಕಗಳು ಮತ್ತು ವ್ಯಕ್ತಿಗಳು, ಅಲ್ ಖೈದಾ ಮತ್ತು ಅವುಗಳ ಅಂಗಸಂಸ್ಥೆಗಳು, ಐಎಸ್‌ಐಎಲ್, ಲಷ್ಕರ್-ಎ-ತೈಬಾ ಮತ್ತು ಜೈಶ್-ಎ-ಮೊಹಮ್ಮದ್ ಸೇರಿದಂತೆ ಅವುಗಳ ಅಂಗಸಂಸ್ಥೆಗಳು, ಹಾಗೆಯೇ ಅವುಗಳ ಕಾರ್ಯಾಚರಣೆಗಳನ್ನು ಸುಗಮಗೊಳಿಸುವ ಪ್ರಾದೇಶಿಕ ಪ್ರಾಯೋಜಕರು ಇನ್ನು ಮುಂದೆ ಅಫ್ಘಾನ್ ಪ್ರದೇಶವನ್ನು ಭಯೋತ್ಪಾದಕ ಚಟುವಟಿಕೆಗಳಿಗಾಗಿ ಬಳಸಿಕೊಳ್ಳದಂತೆ ನೋಡಿಕೊಳ್ಳುವ ಕಡೆಗೆ ಅಂತಾರಾಷ್ಟ್ರೀಯ ಸಮುದಾಯವು ತನ್ನ ಸಂಘಟಿತ ಪ್ರಯತ್ನಗಳನ್ನು ನಿರ್ದೇಶಿಸಬೇಕು ಎಂದು ಆಗ್ರಹಿಸಿದರು.  ಏಪ್ರಿಲ್‌ನಲ್ಲಿ ನಡೆದ ಪಹಲ್ಗಾಮ್ ಭಯೋತ್ಪಾದಕ ಕೃತ್ಯವನ್ನು ಅಫ್ಘಾನಿಸ್ತಾನ ಬಲವಾಗಿ ಖಂಡಿಸಿದೆ ಎಂದು ಹೇಳಿದ ಅವರು, ಪಾಕಿಸ್ತಾನ ಮೂಲದ ಎಲ್‌ಇಟಿ ಭಾಗವಾಗಿ ಕಾರ್ಯನಿರ್ವಹಿಸುವ 'ದಿ ರೆಸಿಸ್ಟೆನ್ಸ್ ಫ್ರಂಟ್' ಈ ದಾಳಿಯನ್ನು ನಡೆಸಿದೆ ಎಂದರು. ಅಫ್ಘಾನಿಸ್ತಾನದಲ್ಲಿ ಭಾರತದ ತಕ್ಷಣದ ಆದ್ಯತೆಗಳಲ್ಲಿ ಮಾನವೀಯ ನೆರವು ಒದಗಿಸುವುದು ಮತ್ತು ಅಫ್ಘಾನ್ ಜನರಿಗೆ ಸಾಮರ್ಥ್ಯ ವೃದ್ಧಿ ಉಪಕ್ರಮಗಳ ಅನು?ನ ಸೇರಿವೆ ಎಂದು ಪಿ.ಹರೀಶ್ ಹೇಳಿದರು.

><><><><><><><><

ಕ್ರಿಕೆಟ್‌ನಲ್ಲಿ, ಭಾರತ ೧೯ ವರ್ಷದೊಳಗಿನ ತಂಡವು ಇಂದು ಇಂಗ್ಲೆಂಡ್ ೧೯ ವರ್ಷದೊಳಗಿನ ತಂಡದ ವಿರುದ್ಧದ ೫ ಪಂದ್ಯಗಳ ಏಕದಿನ ಸರಣಿಯನ್ನು ೩-೨ ಅಂತರದಿಂದ ಗೆದ್ದುಕೊಂಡಿತು. ಸರಣಿಯ ೫ನೇ ಮತ್ತು ಕೊನೆಯ ಪಂದ್ಯದಲ್ಲಿ, ಭಾರತವನ್ನು ಇಂಗ್ಲೆಂಡ್ ೭ ವಿಕೆಟ್‌ಗಳಿಂದ ಸೋಲಿಸಿತು. ಆದಾಗ್ಯೂ, ಆಯುಷ್ ನೇತೃತ್ವದ ಭಾರತ ತಂಡವು ಸರಣಿಯನ್ನು ಗೆದ್ದುಕೊಂಡಿತು. ಅಂತಿಮ ಪಂದ್ಯದಲ್ಲಿ, ಮೊದಲು ಬ್ಯಾಟಿಂಗ್ ಮಾಡಿದ ಭಾರತ, ನಿಗದಿತ ೫೦ ಓವರ್‌ಗಳಲ್ಲಿ ೯ ವಿಕೆಟ್‌ಗಳಿಗೆ ೨೧೦ ರನ್ ಗಳಿಸಿತು. ಇದಕ್ಕೆ ಪ್ರತಿಕ್ರಿಯೆಯಾಗಿ, ಇಂಗ್ಲೆಂಡ್ ೩೨ ಓವರ್‌ಗಳಲ್ಲೇ ಗೆಲುವಿನ ಗುರಿ ತಲುಪಿತು. ಜುಲೈ ೧೨ ರಿಂದ ಬೆಕೆನ್‌ಹ್ಯಾಮ್‌ನಲ್ಲಿ ಪ್ರಾರಂಭವಾಗುವ ಇಂಗ್ಲೆಂಡ್ ೧೯ ವರ್ಷದೊಳಗಿನ ತಂಡದ ವಿರುದ್ಧ ಭಾರತ ಯುವ ತಂಡ ಮುಂದಿನ ೨ ಟೆಸ್ಟ್ ಪಂದ್ಯಗಳನ್ನು ಆಡಲಿದೆ.

><><><><><><><><

ಬಿಲ್ಲುಗಾರಿಕೆಯಲ್ಲಿ, ವಿಶ್ವದ ಮಾಜಿ ನಂ. ೧ ದೀಪಿಕಾ ಕುಮಾರಿ ಮತ್ತು ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತೆ ಜ್ಯೋತಿ ಸುರೇಖಾ ವೆನ್ನಮ್ ಅವರು ನಾಳೆ ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿ ಆರಂಭವಾಗಲಿರುವ ೨೦೨೫ರ ಬಿಲ್ಲುಗಾರಿಕೆ ವಿಶ್ವಕಪ್ ಹಂತ ೪ ರಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ. ಈ ವರ್ಷದ ವಿಶ್ವಕಪ್ ಸರಣಿಯ ಅಂತಿಮ ಹಂತದಲ್ಲಿ ೪೯ ರಾಷ್ಟ್ರಗಳಿಂದ ೩೩೭ ಬಿಲ್ಲುಗಾರರು ಭಾಗವಹಿಸಲಿದ್ದಾರೆ.

><><><><><><><><

ಮುಂಬರುವ ಜನಗಣತಿಯ ಸಮಯದಲ್ಲಿ ಸ್ವಯಂ-ಗಣತಿಗಾಗಿ ವಿಶೇಷ ಮೀಸಲಾದ ಜಾಲತಾಣ ಪೋರ್ಟಲ್ ಲಭ್ಯವಿರುತ್ತದೆ. ಇದು ೨೦೨೭ ರ ಜನಗಣತಿಯ ಎರಡೂ ಹಂತಗಳಿಗೆ ಇದು ಲಭ್ಯವಿರುತ್ತದೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ನೀಡಿರುವ ಭಾರತದ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರು, ಇದು ದೇಶದಲ್ಲಿ ಮೊದಲ ಡಿಜಿಟಲ್ ಜನಗಣತಿಯಾಗಲಿದೆ. ಇಂಗ್ಲಿಷ್, ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಮೊಬೈಲ್ ಅಪ್ಲಿಕೇಶನ್‌ಗಳನ್ನು ಬಳಸಿಕೊಂಡು ದತ್ತಾಂಶ ಸಂಗ್ರಹಿಸಲಾಗುವುದು ಎಂದು ತಿಳಿಸಿದ್ದಾರೆ.

ಗಣತಿದಾರರು ಮತ್ತು ಮೇಲ್ವಿಚಾರಕರು ದತ್ತಾಂಶ ಸಂಗ್ರಹಣೆಗಾಗಿ ತಮ್ಮ ಮೊಬೈಲ್ ಸಾಧನಗಳನ್ನು ಬಳಸುತ್ತಾರೆ ಎಂದು ತಿಳಿಸಿದ ಅವರು, ೨೦೨೭ ರ ಜನಗಣತಿ - ಗೆಜೆಟ್ ಅಧಿಸೂಚನೆಯನ್ನು ಕಳೆದ ತಿಂಗಳು ಹೊರಡಿಸಲಾಯಿತು.

><><><><><><><><><